RA 40/2025
RW-1

**ದಿನಾಂಕಃ 19-12-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**
**ಪಾಟೀ ಸವಾಲು ಶ್ರೀ. V.G.C.ಎದುರುದಾರರ ಪರ ವಕೀಲರಿಂದ**

1. ಮೇಲ್ಮನವಿದಾರರು ನನ್ನ ಅಕ್ಕ. ಸುರೇಶ ಎನ್ನುವವರು ನನ್ನ ಅಕ್ಕನ ಗಂಡ. ಸದರಿ ಸುರೇಶ ರವರಿಗೆ ಸಿಂದಗಿಯಲ್ಲಿ ರಾಸಾಯನಿಕ ಗೊಬ್ಬರದ ಅಂಗಡಿ ಇದೆ ಎಂದರೆ ಸರಿ. ನನ್ನ ಅಕ್ಕನ ಮಗ ದೇಹಲಿಯಲ್ಲಿ ಶಾಲೆಯನ್ನು ಕಲಿಯುತ್ತಿರುವ ವಿಚಾರ ನನಗೆ ಗೊತ್ತಿಲ್ಲ. ಮೇಲ್ಮನವಿದಾರರು ಮತ್ತು ಸುರೇಶ ರವರು ದೆಹಲಿಗೆ ತಮ್ಮ ಮಗನನ್ನು ಭೇಟಿಯಾಗಲು ಆಗಾಗ್ಗೆ ಹೋಗಿ ಬರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸುರೇಶ ರವರಿಗೆ ಗೊಬ್ಬರ ಅಂಗಡಿ ಇರುವುದರಿಂದ ಕೆಲಸದ ಒತ್ತಡದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ಸರ್ವೆ ನಂ. 470 ನ್ನು ನಾನು ನೋಡಿದ್ದೇನೆ. ಇದು 4 ಎಕರೆ ಜಮೀನು ಇದೆ. ಸರ್ವೆ ನಂ. 470/3 ಕೂಡ 4 ಎಕರೆ ಜಮೀನು ಇದೆ ಎಂದರೆ ಸರಿ. ನಾನು ಸರ್ವೆ ನಂ. 470/5 ರ ಮೇಲೆ ಈ ದಾವೆಯನ್ನು ಮಾಡಿದ್ದೇನೆ ಎಂದರೆ ಗೊತ್ತಿಲ್ಲ. ಸರ್ವೆ ನಂ. 470/3 ಕ್ಷೇತ್ರ 4 ಎಕರೆ ಜಮೀನು ನನ್ನ ಕಾಕಾ ಸುರೇಶ ಕೊಪ್ಪಳ ರವರ ಹೆಸರಿನಲ್ಲಿ ಇದೆ ಎಂದರೆ ಸರಿ.

2. ಸರ್ವೆ ನಂ. 470 ರ ಪೈಕಿ 3 ನೇ ಪಟ್ಟಿ ನನ್ನ ತಂದೆಗೆ ಬಂದಿದೆ ಎಂದರೆ ಸರಿ. ಮೇಲ್ಮನವಿದಾರರು ಈ ಮೇಲ್ಮನವಿಯನ್ನು ಸಲ್ಲಿಸಲು ಉದ್ದೇಶ ಪುರಕವಾಗಿ ವಿಳಂಬವನ್ನು ಮಾಡಿಲ್ಲ ಎಂದರೆ ಸರಿಯಲ್ಲ. ಮೇಲ್ಮನವಿದಾರರಿಗೆ ಕೆಲಸದ ಒತ್ತಡ ಇರುವುದರಿಂದ ನಿಗದಿತ ಅವಧಿಯಲ್ಲಿ ಮೇಲ್ಮನವಿಯನ್ನು ಸಲ್ಲಿಸಲು ಆಗಲಿಲ್ಲ ಎಂದರೆ ಸರಿಯಲ್ಲ. ಯಾವುದೇ ರೀತಿಯ ಮೋಜಣಿಯನ್ನು ಮಾಡಿಸದೆ ಸರ್ವೆಯರ ಜೋತೆ ಮಿಲಾಪೆಯಾಗಿ ಖೊಟ್ಟಿ ವರದಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಾಕ್ಷೀ ಪ್ರಮಾಣ ಪತ್ರದಲ್ಲಿ ಸುಳ್ಳು ಬರೆಯಿಸಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲ
(ಸಾಕ್ಷಿಯ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕೊಟ್ಟು ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ,

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಮ್ ಎಫ್ ಸಿ. ಸಿಂದಗಿ